


ದುಖಿ ಸಮಗಾರ ಮನೆ ಬಾಗಿಲು ಮುಂದೆ ಕಸ ಗುಡಿಸುತ್ತಿದ್ದ. ಅವನ ಹೆಂಡತಿ ಜುರಿಯಾ ಮನೆ ಗೋಡೆಯನ್ನು ಸೆಗಣಿಯಿಂದ ಸಾರಿಸುತ್ತಿದ್ದಳು. ಸ್ವಲ್ಪ ಸಮಯದ ನಂತರ ಇಬ್ಬರು ತಮ್ಮ ಕೆಲಸಗಳಿಂದ ವಿಶ್ರಾಂತಿ ಪಡೆದರು. ಜುರಿಯಾ ಗಂಡನಿಗೆ ಎಚ್ಚರಿಸಿದಳು.

"ಇವತ್ತು ಪಂಡಿತರನ್ನು ಕಾಣಬೇಕಾಗಿತ್ತಲ್ಲಾ... ಬೇಗ ಅವರಿಗೆ ಕರೆದುಕೊಂಡು ಬನ್ನಿ... ಮತ್ತೆ ಎಲ್ಲಿಯಾದರೂ ಹೊರಟು ಬಿಟ್ಟಾರು..."